KAKP200013472017

# 1 ನೇ ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕುಷ್ಟಗಿ

ಉಪಸ್ಥಿತರುಃ

**ಶ್ರೀ ಮಹಾಂತೇಶ ಚೌಲಗಿ.,** ಬಿ.ಎ., ಎಲ್ಎಲ್.ಬಿ.,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕುಷ್ಟಗಿ.

ದಿನಾಂಕಃ **01** ನೇ ಜುಲೈ **2026**

**ಅಪರಾಧಿಕ ಪ್ರಕರಣ ಸಂಖ್ಯೆಃ641/2017**

| | | |
|---|---|---|
| ಫಿರ್ಯಾದುದಾರರು | ಃ | ಸರ್ಕಾರದ ಪರವಾಗಿ,<br>ಪೊಲೀಸ್ ವೃತ್ತ ನಿರೀಕ್ಷಕರು, ಕುಷ್ಟಗಿ ವೃತ್ತ<br>ತಾವರಗೇರಾ ಪೊಲೀಸ್ ಠಾಣೆ,<br>ಕುಷ್ಟಗಿ ತಾಲೂಕು, ಕೊಪ್ಪಳ ಜಿಲ್ಲೆ |

**(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)**

**- ವಿರುದ್ಧ -**

| | | |
|---|---|---|
| ಆರೋಪಿ | ಃ | 1. ಮುರ್ತುಜಸಾಬ್ ವಾಲಿಕರ |
| ತಂದೆ | ಃ | ಮಕ್ತುಮ್ ಸಾಬ್ ವಾಲಿಕರ |
| ವಾಸ | ಃ | ದೋಟಿಹಾಳ ಗ್ರಾಮ, ಕುಷ್ಟಗಿ ತಾಲೂಕು,<br>ಕೊಪ್ಪಳ ಜಿಲ್ಲೆ. |

| | | |
|---|---|---|
| ಆರೋಪಿ | ಃ | 2. ಖಾಸಿಂಸಾಬ ವಾಲಿಕರ |
| ತಂದೆ | ಃ | ಮಕ್ತುಮ್ ಸಾಬ್ ವಾಲಿಕರ |

**(1 ಮತ್ತು 2 ನೇ ಆರೋಪಿತರ ಪರ ಶ್ರೀ.ವಿ.ಕೆ.ಕೆ., ವಕೀಲರು)**

| | | |
|---|---|---|
| ಅಪರಾಧ ನಡೆದ ದಿನಾಂಕ | : | 13.12.2016 |
| ಅಪರಾಧ ವರದಿಯಾದ ದಿನಾಂಕ | : | 13.12.2016 |
| ಅಂತಿಮ ವರದಿ ಸಲ್ಲಿಸಿದ ದಿನಾಂಕ | : | 25.12.2016 |
| ದೋಷಾರೋಪಣೆ ರಚಿಸಿದ ದಿನಾಂಕ | | 05.05.2018 |
| ಆರೋಪಿ ದಸ್ತಗಿರಿಯಾದ ದಿನಾಂಕ | : | ಜಾಮೀನಿನ ಮೇಲೆ ಇರುತ್ತಾರೆ |
| ಫಿರ್ಯಾದುದಾರರ ಹೆಸರು | : | ಮುತ್ತು ಕಠಾರಿ |
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | : | 05.12.2018 |
| ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | : | 21.05.2026 |
| ಅಪರಾಧ ಕಾಯ್ದೆ ಮತ್ತು ಕಲಂ | : | ಭಾರತೀಯ ದಂಡ ಸಂಹಿತೆ ಕಲಂ 279, 337, 304(ಎ) ಮತ್ತು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ.180, 181, 196 |
| ತೀರ್ಪನ್ನು ಖಾಯ್ದಿರಿಸಿದ ದಿನಾಂಕ | : | 25.05.2026 |
| ತೀರ್ಪನ್ನು ಘೋಷಿಸಿದ ದಿನಾಂಕ | : | 01.07.2026 |
| ಶಿಕ್ಷೆ ಆದೇಶ ವಿಧಿಸಿದ ದಿನಾಂಕ ಯಾವುದಾದರೂ ಇದ್ದರೆ | | --- |

| ಆರೋಪಿಯ ಶ್ರೇಣಿ | ಆರೋಪಿಯ ಹೆಸರು | ಬಂಧನದ ದಿನಾಂಕ | ಜಾಮೀನಿನ ಮೇಲೆ ಬಿಡುಗಡೆ ಯಾದ ದಿನಾಂಕ | ಆರೋಪಿತರ ಮೇಲೆ ಆಪಾದಿಸಲಾದ ಅಪರಾಧಗಳು | ಖುಲಾಸೆಯೇ ಅಥವಾ ಶಿಕ್ಷೆಯೇ | ಶಿಕ್ಷೆವಿಧಿಸಲಾಗಿದೆಯೇ | ದಂ.ಪ್ರ.ಸಂ. ಕಲಂ 428 ರ ರೀತ್ಯಾ ವಿಚಾರಣೆಯ ಸಮಯದಲ್ಲಿ ಬಂಧನಕ್ಕೊಳಗಾದ ಅವಧಿ |
|---|---|---|---|---|---|---|---|
| **1** | ಮುರ್ತುಜ ಸಾಬ್ | -- | -- | ಭಾ. ದಂ.ಸಂ.ಕಲಂ 279, 337, 304(ಎ) ಮತ್ತು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ .180, 181, 196 | ಖುಲಾಸೆ | ಇಲ್ಲ | ಅನ್ವಯಿಸುವುದಿಲ್ಲ |
| **2** | ಖಾಸಿಂ ಸಾಬ | -- | -- | ಭಾ.ದಂ.ಸಂ.ಕಲಂ 279, 337, 304(ಎ) ಮತ್ತು | ಖುಲಾಸೆ | ಇಲ್ಲ | ಅನ್ವಯಿಸುವುದಿಲ್ಲ |

| | | | | | | | |
|---|---|---|---|---|---|---|---|
| | | | | ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ.180, 181, 196 | | | |

# ತೀರ್ಪು

ಆರೋಪಿತರು ಭಾರತೀಯ ದಂಡ ಸಂಹಿತೆಯ ಕಲಂ.279, 337, 304(ಎ) ಮತ್ತುಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ.180, 181, 196 ರಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ಆರಕ್ಷಕ ಉಪನಿರೀಕ್ಷಕರು, ತಾವರಗೇರಾ ಪೊಲೀಸ್ ಠಾಣೆ ರವರು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

## 2. ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶಃ

ದಿನಾಂಕಃ**13.12.2016** ರಂದು ಮಧ್ಯಾಹ್ನ 04-30 ಗಂಟೆಯ ಸುಮಾರಿಗೆ ತಾವರಗೇರಾ ಸೀಮಾದ ತಾವರಗೇರಾ-ಮುದೇನೂರ ರಸ್ತೆಯ ಮೇಲೆ ಶಾಮೀದ ಬೀ ರವರು ಟಾಂಟಾಂ ವಾಹನ ತಾತ್ಕಾಲಿಕ ನೊಂದಣಿ ಸಂಖ್ಯೆಃಕೆಎ-34-ಟಿ.ಆರ್001510/2016-17 ಚೆಸ್ಸಿ ಸಂಖ್ಯೆಃMA1LE2FYSG3H35233 ನೇದ್ದರ ಹಿಂದೆ ಕುಳಿತುಕೊಂಡಿದ್ದು, ಚಾಸಾ.1 ನೇದ್ದವರು ಟಾಂಟಾಂ ವಾಹನವನ್ನು ಚಲಾಯಿಸಿಕೊಂಡು ಮುದೆನೂರ ಕಡೆಗೆ ಹೊರಟಿದ್ದಾಗ, ಮಹಾಂತಗೌಡ ರವರ ಜಮೀನಿನ ಹತ್ತಿರ 1 ನೇ ಆರೋಪಿ ಟ್ರ್ಯಾಕ್ಟರ್ ನೊಂದಣಿ ಸಂಖ್ಯೆಃಕೆಎ-37-ಟಿ.ಎ-8026 ಟ್ರಾಲಿ ನೊಂದಣಿ ಸಂಖ್ಯೆಃಕೆಎ-37-ಟಿ.ಎ-8027 ನೇದ್ದನ್ನು ಅಡ್ಡಾದಿಡ್ಡಿಯಾಗಿ ಅಲಕ್ಷ್ಯತನದಿಂದ ಚಲಾಯಿಸಿಕೊಂಡು ಹೊರಟಾಗ, ಚಾಸಾ.1 ನೇದ್ದವರು ಟಾಂಟಾಂ ವಾಹನವನ್ನು ಓವರ್ ಟೇಕ್ ಮಾಡುತ್ತಿರುವಾಗ 1 ನೇ ಆರೋಪಿತನು ಹಿಂದೆ ಬರುವ ವಾಹನಗಳನ್ನು ಗಮನಿಸದೇ ಒಮ್ಮೆಲೇ ಟ್ರ್ಯಾಕ್ಟರನ್ನು ಬಲಕ್ಕೆ ತಿರುಗಿಸಿಕೊಂಡಿದ್ದರಿಂದ ಟ್ರ್ಯಾಕ್ಟರನ ಹಿಂದಿನ ಟ್ರಾಲಿಯು ಟಾಂಟಾಂ ವಾಹನದ ಹಿಂದಿನ ಭಾಗಕ್ಕೆ ಟಕ್ಕರ್ ಆಗಿದ್ದರಿಂದ ಟಾಂಟಾಂ ವಾಹನ ರಸ್ತೆಯ ಬಾಜು ಪಲ್ಟಿಯಾಗಿ ಬಿದ್ದ ಪರಿಣಾಮ

ಚಾಸಾ.1 ನೇದ್ದವರಿಗೆ ಸಾದಾ ಸ್ವರೂಪದ ಗಾಯಗಳಾಗಿದ್ದು, ಶಾಮೀದ ಬೀ ಇವಳ ತಲೆಗೆ, ಎರಡು ಕೈಗಳಿಗೆ, ಹೊಟ್ಟೆಗೆ ಭಾರಿ ರಕ್ತಗಾಯವಾಗಿದ್ದು, ಚಾಸಾ.1 ರವರು ಗಾಯಗೊಂಡ ಶಾಮೀದ ಬೀ ರವರನ್ನು ಖಾಸಗಿ ವಾಹನದಲ್ಲಿ ಮುದೇನೂರ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆ ಕುರಿತು ದಾಖಲಿದಾಗ, ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದು, 1 ನೇ ಆರೋಪಿತನು ಸದರಿ ಟ್ರ್ಯಾಕ್ಟರ ವಾಹನವನ್ನು ಚಲಾಯಿಸಲು ಯಾವುದೇ ಪರವಾನಿಗೆ ಪತ್ರ ಹೊಂದದೇ ಹಾಗೂ ವಿಮಾ ಅವಧಿ ಮುಗಿದಂತಹ ವಾಹನವನ್ನು ಚಲಾಯಿಸಿದ್ದು, 2 ನೇ ಆರೋಪಿತನು ಯಾವುದೇ ಚಾಲನಾ ಪರವಾನಿಗೆ ಹೊಂದಿರದ 1 ನೇ ಆರೋಪಿಗೆ ವಾಹನವನ್ನು ಚಲಾಯಿಸಲು ನೀಡಿದ್ದು ಈ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ.279, 337, 304(ಎ) ಮತ್ತುಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ.180, 181, 196 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**3**. ಚಾಸಾ-1 ರವರು ನೀಡಿದ ದೂರಿನ ಆಧಾರದ ಮೇಲೆ ತಾವರಗೇರಾ ಪೊಲೀಸ್ ಠಾಣೆಯವರು ಠಾಣಾ ಅಪರಾಧಿಕ ಕ್ರಮ ಸಂಖ್ಯೆ 131/2016 ಭಾರತೀಯ ದಂಡ ಸಂಹಿತೆಯ ಕಲಂ.279, 337, 304(ಎ) ಮತ್ತುಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ.180, 181, 196 ರಡಿಯಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ.

**4**. ತನಿಖಾಧಿಕಾರಿಗಳು ತಕ್ಷೀರು ಸ್ಥಳಕ್ಕೆ ಭೇಟಿ ನೀಡಿ, ಪಂಚರ ಸಮಕ್ಷಮ ಸ್ಥಳ ಮಹಜರನ್ನು ತಯಾರಿಸಿ, ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸಿಕೊಂಡು ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.279, 337, 304(ಎ) ಮತ್ತುಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ.180, 181, 196 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿದ್ದಾನೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**5**. ತನಿಖಾಧಿಕಾರಿಗಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ ನಂತರ ಭಾರತೀಯ ದಂಡ ಸಂಹಿತೆ ಕಲಂ.279, 337, 304(ಎ) ಮತ್ತುಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ.180, 181, 196 ರಡಿಯಲ್ಲಿ ಮಾಡಲಾದ ಅಪರಾಧದ ಬಗ್ಗೆ ಆರೋಪಿತರ ವಿರುದ್ಧ ಅಪರಾಧಿಕ ಸಂಜ್ಞೆಯನ್ನು ತೆಗೆದುಕೊಂಡು ಮತ್ತು ಪ್ರಕರಣವನ್ನು ನೋಂದಾಯಿಸಿಕೊಂಡು ಸಮನ್ಸ್ ಜಾರಿಮಾಡಿದ್ದು, ಅದರಂತೆ ಆರೋಪಿತರು ತಮ್ಮ ವಕೀಲರ ಮೂಲಕ ಹಾಜರಾಗಿದ್ದು, ತದನಂತರ ಅಪರಾಧಿಕ ಪ್ರಕ್ರಿಯ ಸಂಹಿತೆ ಕಲಂ.207 ರಡಿಯಲ್ಲಿ ಅಭಿಯೋಜನಾ ದಾಖಲೆಗಳನ್ನು ಪೂರೈಸಿ, ಆರೋಪಿತರನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಲಾಗಿರುತ್ತದೆ.

**6.** ಭಾರತೀಯ ದಂಡ ಸಂಹಿತೆ ಕಲಂ.279, 337, 304(ಎ) ಮತ್ತುಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ.180, 181, 196 ರಡಿಯಲ್ಲಿ ಆಪಾದನೆಯ ಸಾರಾಂಶವನ್ನು ಓದಿ ಹೇಳಲಾಗಿ, ಆರೋಪಿತರು ತಾವು ಯಾವುದೇ ಅಪರಾಧವನ್ನು ಮಾಡಿರುವುದಿಲ್ಲ ಮತ್ತು ಪ್ರತಿರಕ್ಷೆ ಮಾಡಿಕೊಳ್ಳುವುದಾಗಿ ತಿಳಿಸಿರುತ್ತಾರೆ.

**7.** ಅಭಿಯೋಜನೆ ಪರ ಪ್ರಕರಣವನ್ನು ರುಜುವಾತುಪಡಿಸಲು ಒಟ್ಟು **17** ಸಾಕ್ಷಿಗಳ ಪೈಕಿ 13 ಸಾಕ್ಷಿಗಳನ್ನು ಪ್ರಾಸಾ-1 ರಿಂದ 13 ಎಂದು, 17 ದಾಖಲೆಗಳನ್ನು ಕ್ರಮವಾಗಿ ನಿಪಿ-1 ರಿಂದ 17 ಎಂದು ಗುರುತಿಸಲಾಯಿತು. ಅಭಿಯೋಜನೆ ಪ್ರಕರಣ ಸಾಕ್ಷಿ ವಿಚಾರಣೆಯಲ್ಲಿ ಆರೋಪಿತರ ವಿರುದ್ದ ವ್ಯತಿರಿಕ್ತ ಸಾಕ್ಷ್ಯಗಳು ಕಂಡುಬಂದಿರುವದರಿಂದ ಅಪರಾಧಿಕ ಪ್ರಕಿಯಾ ಸಂಹಿತೆಯ ಕಲಂ 313 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು. ಆರೋಪಿತರು ಅಭಿಯೋಜನೆ ಪ್ರಕರಣದ ಸಾಕ್ಷಿದಾರರು ನುಡಿದಿರುವ ಸಾಕ್ಷಿಯನ್ನು ಅಲ್ಲಗಳೆದಿರುತ್ತಾರೆ. ತಮ್ಮ ಪರವಾಗಿ ಯಾವುದೇ ಸಾಕ್ಷಿಗಳು ಇರುವುದಿಲ್ಲ ಎಂದು ಹೇಳಿರುತ್ತಾರೆ.

**8**. ಅಭಿಯೋಜನೆಯು ಈ ಕೆಳಕಂಡ ಅಂಶಗಳನ್ನು ಸಂಶಯಾತೀತವಾಗಿ ನಿರೂಪಿಸುವುದೇಃ

1. ದಿನಾಂಕ:**13.12.2016** ರಂದು ಮಧ್ಯಾಹ್ನ 04-30 ಗಂಟೆಯ ಸುಮಾರಿಗೆ ತಾವರಗೇರಾ ಸೀಮಾದ ತಾವರಗೇರಾ-ಮುದೇನೂರ ರಸ್ತೆಯ ಮೇಲೆ ಶಾಮೀದ ಬೀ ರವರು ಟಾಂ ಟಾಂ ವಾಹನ ತಾತ್ಕಾಲಿಕ ನೊಂದಣಿ ಸಂಖ್ಯೆ: ಟಿ.ಆರ್001510/2016-17 ಚೆಸ್ಸಿ ಸಂಖ್ಯೆ:MA1LE2FYSG3H35233 ನೇದ್ದರ ಹಿಂದೆ ಕುಳಿತುಕೊಂಡಿದ್ದು, ಚಾಸಾ.1 ನೇದ್ದವರು ಟಾಂಟಾಂ ವಾಹನವನ್ನು ಚಲಾಯಿಸಿಕೊಂಡು ಮುದೆನೂರ ಕಡೆಗೆ ಹೊರಟಿದ್ದಾಗ, ಮಹಾಂತಗೌಡ ರವರ ಜಮೀನಿನ ಹತ್ತಿರ 1 ನೇ ಆರೋಪಿ ಟ್ರ್ಯಾಕ್ಟರ್ ನೊಂದಣಿ ಸಂಖ್ಯೆ:ಕೆಎ-37-ಟಿ.ಎ-8026 ಟ್ರಾಲಿ ನೊಂದಣಿ ಸಂಖ್ಯೆ:ಕೆಎ-37-ಟಿ.ಎ-8027 ನೇದ್ದನ್ನು ಅಡ್ಡಾದಿಡ್ಡಿಯಾಗಿ ಅಲಕ್ಷ್ಯತನದಿಂದ ಚಲಾಯಿಸಿಕೊಂಡು ಹೊರಟಾಗ, ಚಾಸಾ.1 ನೇದ್ದವರು ಟಾಂಟಾಂ ವಾಹನವನ್ನು ಓವರ್ ಟೇಕ್ ಮಾಡುತ್ತಿರುವಾಗ 1 ನೇ ಆರೋಪಿತನು ಹಿಂದೆ ಬರುವ ವಾಹನಗಳನ್ನು ಗಮನಿಸದೇ ಒಮ್ಮೆಲೇ ಟ್ರ್ಯಾಕ್ಟರನ್ನು ಬಲಕ್ಕೆ ತಿರುಗಿಸಿಕೊಂಡಿದ್ದರಿಂದ ಟ್ರ್ಯಾಕ್ಟರನ ಹಿಂದಿನ ಟ್ರಾಲಿಯು ಟಾಂಟಾಂ ವಾಹನದ ಹಿಂದಿನ ಭಾಗಕ್ಕೆ ಟಕ್ಕರ್ ಆಗಿದ್ದರಿಂದ ಟಾಂಟಾಂ ವಾಹನ ರಸ್ತೆಯ ಬಾಜು ಪಲ್ಟಿಯಾಗಿ ಬಿದ್ದ ಪರಿಣಾಮ ಚಾಸಾ.1 ನೇದ್ದವರಿಗೆ ಸಾದಾ ಸ್ವರೂಪದ ಗಾಯಗಳಾಗಿದ್ದು, ಶಾಮೀದ ಬೀ ಇವಳ ತಲಗೆ, ಎರಡು ಕೈಗಳಿಗೆ, ಹೊಟ್ಟೆಗೆ ಭಾರಿ ರಕ್ತಗಾಯವಾಗಿದ್ದು, ಚಾಸಾ.1 ರವರು ಗಾಯಗೊಂಡ ಶಾಮೀದ ಬೀ ರವರನ್ನು ಖಾಸಗಿ ವಾಹನದಲ್ಲಿ ಮುದೇನೂರ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆ ಕುರಿತು ದಾಖಲಿದಾಗ, ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದು, 1 ನೇ ಆರೋಪಿತನು ಸದರಿ ಟ್ರ್ಯಾಕ್ಟರ ವಾಹನವನ್ನು ಚಲಾಯಿಸಲು ಯಾವುದೇ ಪರವಾನಿಗೆ ಪತ್ರ

ಹೊಂದದೇ ಹಾಗೂ ವಿಮಾ ಅವಧಿ ಮುಗಿದಂತಹ ವಾಹನವನ್ನು ಚಲಾಯಿಸಿದ್ದು, 2 ನೇ ಆರೋಪಿತನು ಯಾವುದೇ ಚಾಲನಾ ಪರವಾನಿಗೆ ಹೊಂದಿರದ 1 ನೇ ಆರೋಪಿಗೆ ವಾಹನವನ್ನು ಚಲಾಯಿಸಲು ನೀಡಿದ್ದರಿಂದ, ಈ ಮೂಲಕ 1 ನೇ ಆರೋಪಿಯು **ಭಾರತೀಯ ದಂಡ ಸಂಹಿತೆ ಕಲಂ.279, 337, 304(ಎ) ಮತ್ತು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ. 181, 196 ರಡಿಯಲ್ಲಿ ಹಾಗೂ 2 ನೇ ಆರೋಪಿತನು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ.180** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ?

2. ಯಾವ ಆದೇಶ?

**9**. ಅಭಿಯೋಜನೆ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರ ಮತ್ತು ಆರೋಪಿಯ ಪರವಾಗಿ ಶ್ರೀ. ವಿ.ಕೆ.ಕೆ., ವಕೀಲರ ವಾದವನ್ನು ಆಲಿಸಲಾಯಿತು.

**10.** ನ್ಯಾಯಾಲಯದ ಮುಂದೆ ಸಲ್ಲಿಸಿರುವ ದಾಖಲೆಗಳನ್ನು ಮತ್ತು ಸಾಕ್ಷ್ಯಗಳನ್ನು ಪರಿಶೀಲಿಸಿ ಈ ಮೇಲೆ ಹೇಳಿದ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಲಾಗಿದೆ.

**ಅಂಶ 1 ಃ -** ನಕಾರಾತ್ಮಕವಾಗಿ
**ಅಂಶ 2 ಃ -** ಅಂತಿಮ ಆದೇಶದಂತೆ,
ಈ ಕೆಳಕಾಣಿಸಿರುವ ಕಾರಣಗಳಿಗಾಗಿಃ

## ಕಾರಣಗಳು

**11**. **ಅಂಶ 1 ಃ** - ಈ ಪ್ರಕರಣದಲ್ಲಿ ಆರೋಪಿಯ ಮೇಲೆ ಮಾಡಲಾದಂತಹ ಆರೋಪವನ್ನು ರುಜುವಾತು ಪಡಿಸಲು ಬಾಧಿತ ಮತ್ತು ಪ್ರತ್ಯಕ್ಷ ಸಾಕ್ಷಿದಾರ **ಚಾಸಾ-1 ಮುತ್ತು ಕಠಾರಿ** ಇವರನ್ನು **ಪ್ರಾಸಾ-1** ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಪ್ರಾಸಾ-1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ.7 ನನ್ನ ಅಳಿಯನಾಗಬೇಕು. ಈಗ್ಗೆ ಸುಮಾರು 2 ವರ್ಷಗಳ ಹಿಂದೆ ನಾನು ಮತ್ತು ಚಾಸಾ.7 ರವರು ಟಾಂಟಾಂನಲ್ಲಿ

ತಾವರಗೇರಾದಿಂದ ಮುದೇನೂರು ಗ್ರಾಮಕ್ಕೆ ಹೋಗುತ್ತಿದ್ದಾಗ, ಜುಮಲಾಪುರ ಗ್ರಾಮದಲ್ಲಿ ಒಬ್ಬ ಅಜ್ಜಿ ನಮ್ಮ ಟಾಂಟಾಂ ವಾಹನದಲ್ಲಿ ಹತ್ತಿದಳು. ಸಾಯಂಕಾಲ 04-00 ಗಂಟೆಯ ಸುಮಾರಿಗೆ ಜುಮಲಾಪುರ ಸೀಮಾದ ಹತ್ತಿರ ಎದುರುಗಡೆಯಿಂದ ಹುಲ್ಲು ಹಾಕಿಕೊಂಡು ಟ್ರ್ಯಾಕ್ಟರ ಚಾಲಕನು ಆಚೆ-ಈಚೆ ಚಲಾಯಿಸಿಕೊಂಡು ಬರುತ್ತಿದ್ದನ್ನು ನೋಡಿ ನಮ್ಮ ಟಾಂಟಾಂ ಚಾಲಕ ಟ್ರ್ಯಾಕ್ಟರನ್ನು ಸೈಡ್ ಹಾಕಿ ಮುಂದೆ ಹೋಗುವಾಗ ಟಚ್ ಆಗಿರುತ್ತದೆ. ನಾವು ಹೋಗುತ್ತಿದ್ದ ಟಾಂಟಾಂ ವಾಹನದ ಚಾಲಕನು ನಿಧಾನವಾಗಿ ಹೋಗುತ್ತಿದ್ದು, ಟ್ರ್ಯಾಕ್ಟರ್ ಚಾಲಕನು ಅತಿವೇಗವಾಗಿ ಚಲಾಯಿಸುತ್ತಿದ್ದನು. ಟ್ರ್ಯಾಕ್ಟರ್ ಚಾಲಕನು ಒಮ್ಮಿಂದೊಮ್ಮೆಲೆ ನಮ್ಮ ವಾಹನಕ್ಕೆ ಟಚ್ ಮಾಡಿದ್ದರಿಂದ, ನಮ್ಮ ವಾಹನ ಗಾಜುಗಳು ಒಡೆದು ಜಖಂಗೊಂಡಿರುತ್ತದೆ. ನನ್ನ ತಲೆಗೆ ಗಾಯವಾಗಿತ್ತು. ನಮ್ಮ ವಾಹನದಲ್ಲಿ ಕುಳಿತಿದ್ದ ಅಜ್ಜಿ ಶಾಮವ್ವಳಿಗೆ ತಲೆಗೆ ಭಾರಿ ಪೆಟ್ಟಾಗಿದ್ದು, ಆಕೆಯನ್ನು ಮುದೇನೂರುಸ ರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಚಾಸಾ.7 ರವರಿಗೆ ಅಪಘಾದಲ್ಲಿ ಯಾವುದೇ ಗಾಯವಾಗಿಲ್ಲ. ಟ್ರ್ಯಾಕ್ಟರ್ ನಂ.ಕೆಎ-37-8026 ಆಗಿರುತ್ತದೆ. ಟ್ರ್ಯಾಕ್ಟರ್ ಚಾಲಕನ ಹೆಸರು ಮುರ್ತುಜಸಾಬ ಅಂತಾ ಇದ್ದು, ಈ ದಿನ ನ್ಯಾಯಾಲಯದ ಮುಂದೆ ನಿಂತಿರುವ 1 ನೇ ಆರೋಪಿಯಾಗಿರುತ್ತಾನೆ. ನಂತರ ಪೋಲಿಸರು ಆಸ್ಪತ್ರೆಗೆ ಬಂದಿರುತ್ತಾರೆ. ಆ ಸಮಯದಲ್ಲಿ ಅಪಘಾತದ ಬಗ್ಗೆ ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಅಪಘಾತವು ಟ್ರ್ಯಾಕ್ಟರ್ ಚಾಲಕನ ತಪ್ಪಿನಿಂದ ಆಗಿರುತ್ತದೆ. ನಂತರ ನಾವು ಕುಷ್ಟಗಿ ಆಸ್ಪತ್ರೆಗೆ ಬಂದಿರುತ್ತೇವೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

ಫ್ರಾಸಾ.1 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲಿಗೊಳಪಡಿಸಿದಾಗ, ಸದರಿ ಪಾಟೀಸವಾಲಿನಲ್ಲಿ, ನಾವು ಟಾಂ ಟಾಂ ಹಿಂದಿನ ಕಡೆ ಕುಳಿತಿದ್ದರಿಂದ ಮುಂದಿನ ರಸ್ತೆಯು ಕಾಣುತ್ತಿರಲಿಲ್ಲ ಎಂದರೆ ಸರಿ. ಮೂರು ಗಾಲಿನ ಟಾಂ ಟಾಂ ವಾಹನ ಜೋರಾಗಿ ಹೋಗುತ್ತಿತ್ತು ಎಂದರೆ ಸರಿ. ಟಾಂ ಟಾಂ ವಾಹನದ ಚಾಲಕ ಜೋರಾಗಿ ನಡೆಸಿದ್ದರಿಂದ, ತಗ್ಗು ದಿನ್ನೆಯಲ್ಲಿ ಟಾಂ ಟಾಂ ಪಲ್ಟಿಯಾಗಿ ಬಿತ್ತು ಎಂದರೆ ಯಾವ ರೀತಿ ಬಿತ್ತು ನನಗೆ ಗೊತ್ತಿಲ್ಲ ಎಂದು ನಿಪಿ.1 ದೂರಿನಲ್ಲಿನ ಅಂಶಗಳಿಗೆ ವ್ಯತಿರಿಕ್ತ ಸಾಕ್ಷ್ಯ ನುಡಿದಿರುತ್ತಾರೆ. ಮುಂದುವರೆದು, ಆರೋಪಿಯ ಟ್ರ್ಯಾಕ್ಟರ್ ರಸ್ತೆಯ ಎಡಭಾಗದಲ್ಲಿ ನಿಧಾನವಾಗಿ ಹೋಗುತ್ತಿತ್ತು ಎಂದರೆ ಸರಿ. ಟ್ರ್ಯಾಕ್ಟರ್ ಮತ್ತು ಟ್ರಾಲಿ ದಾಟಿಕೊಂಡು ಹೋದ ನಂತರ

ಟಾಂ ಟಾಂ ಪಲ್ಟಿಯಾಗಿ ಬಿತ್ತು ಮತ್ತು ಟಾಂ ಟಾಂ ವಾಹನಕ್ಕೆ ಯಾವುದೇ ಅಡೆ-ತಡೆ ಇರಲಿಲ್ಲ ಎಂದರೆ ಸರಿ ಮತ್ತು ದೂರಿನಲ್ಲಿರುವ ವಿಷಯಗಳು ಗೊತ್ತಿಲ್ಲ ಮತ್ತು 1 ನೇ ಆರೋಪಿಯನ್ನು ಇದೇ ದಿನ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿ ಎಂದು ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಆದ್ದರಿಂದ ಪ್ರಾಸಾ.1 ರವರ ಸಾಕ್ಷ್ಯವು ನಂಬಲು ಅನರ್ಹವಾಗಿರುತ್ತದೆ. ಇನ್ನುಳಿದಂತೆ ಆರೋಪಿತರ ಪರ ವಕೀಲರು ಹಾಕಿರುವ ಎಲ್ಲಾ ಹಾರಿಕೆ ನಿರಾಕರಣೆಗಳನ್ನು ಪ್ರಾಸಾ-1 ರವರು ಅಲ್ಲಗಳಲೆದಿರುತ್ತಾರೆ.

**12.** ಈ ಪ್ರಕರಣದ ಶವ ಪಂಚನಾಮೆ ಸಾಕ್ಷಿ ಹಾಗೂ ಪ್ರತ್ಯಕ್ಷ ಸಾಕ್ಷಿದಾರರಾದ **ಚಾಸಾ-3 ರಾಮಣ್ಣ ಇವರನ್ನು ಪ್ರಾಸಾ-2 ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಪ್ರಾಸಾ-2** ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ನಮ್ಮೂರಿನ ಮೃತ ಶಾಮೀದಬಿ ಗಂಡ ಖಾಜಾಸಾಬ ನನಗೆ ಪರಿಚಯ. ಈಕೆಯು ಸುಮಾರು 2 ವರ್ಷಗಳ ಹಿಂದೆ ಸಾಸ್ವಿಹಾಳ ಗ್ರಾಮ ಸೀಮಾದಲ್ಲಿ ಜರುಗಿದ ಅಪಘಾತದಲ್ಲಿ ತೀರಿಕೊಂಡಿರುತ್ತಾಳೆ. ಅಪಘಾತವು ಟಾಂಟಾಂ ಮತ್ತು ಟ್ರ್ಯಾಕ್ಟರ್ ನಡುವೆ ಆಗಿತ್ತು. ಅಪಘಾತವಾದಾಗ ನಾನು ಊರಿನಲ್ಲಿದ್ದೆ. ಶವ ಪಂಚನಾಮೆಗೆ ಸಹಿಯನ್ನು ಮುದೇನೂರು ಗ್ರಾಮದ ಬಸ್ ನಿಲ್ದಾಣದ ದೇವಸ್ಥಾನದ ಹತ್ತಿರ ಬಜಾರನಲ್ಲಿ ಮಾಡಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

ಪ್ರಾಸಾ.2 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲಿಗೊಳಪಡಿಸಿದಾಗ, ಸದರಿ ಪಾಟೀಸವಾಲಿನಲ್ಲಿ, ನಾನು ಘಟನೆಯನ್ನು ಕಣ್ಣಾರೆ ನೋಡಿರುವುದಿಲ್ಲ ಮತ್ತು ಪೋಲಿಸರು ನನ್ನ ಸಮಕ್ಷಮ ಶವಪಂಚನಾಮೆ ಜರುಗಿಸಿರುವುದಿಲ್ಲವೆಂದು ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಇನ್ನುಳಿದಂತೆ ಆರೋಪಿತರ ಪರ ವಕೀಲರು ಹಾಕಿರುವ ಎಲ್ಲಾ ಹಾರಿಕೆ ನಿರಾಕರಣೆಗಳನ್ನು ಪ್ರಾಸಾ-2 ರವರು ಅಲ್ಲಗಳಲೆದಿರುತ್ತಾರೆ.

**13.** ಈ ಪ್ರಕರಣದ **ಜಪ್ತಿ ಪಂಚನಾಮೆಯ ಸಾಕ್ಷಿಯಾದ ಚಾಸಾ-6 ದಿವಾನಸಾಬ ಇವರನ್ನು ಪ್ರಾಸಾ-3 ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಪ್ರಾಸಾ-3** ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ನಾನು ಕಾಗದಪತ್ರಕ್ಕೆ ಹೆಬ್ಬೆಟ್ಟು ಸಹಿ ಮಾಡುತ್ತೇನೆ. ಈಗ್ಗೆ

ಸುಮಾರು 21/2 ವರ್ಷಗಳ ಹಿಂದೆ ನಮ್ಮೂರಿನ ಜುಮಲಾಪುರ ದಾಟಿ ಸಾಸ್ವಿಹಾಳ ಸೀಮಾದ ಯರಿ ಹೊಲದ ಹತ್ತಿರ ಒಂದು ವಾಹನವು ಪಲ್ಟಿಯಾಗಿ ಬಿದ್ದಿದ್ದು, ಈ ಸಂಬಂಧ ಪೋಲಿಸರು ಈಗ ತೋರಿಸಿದ ಪಂಚನಾಮೆಗೆ ನನ್ನ ಹೆಬ್ಬಟ್ಟು ಸಹಿ ಪಡೆದುಕೊಂಡಿರುತ್ತಾರೆ. ನಿಪಿ.4 ಕ್ಕೆ ಸ್ಥಳದಲ್ಲಿ ಒಂದೇ ಕಡೆ ಮಾಡಿರುತ್ತೇನೆ. ಪೋಲಿಸರು ಪುನಃ ನನ್ನನ್ನು ಬೇರೆ ಎಲ್ಲಿಯೋ ಕರೆದುಕೊಂಡು ಹೋಗಿಲ್ಲ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

ಆರೋಪಿ ಪರ ವಕೀಲರು ಪ್ರಾಸಾ-3 ರವರನ್ನು ಪಾಟಿ ಸವಾಲು ಮಾಡಿದಾಗ ತಮ್ಮ ಪಾಟಿ ಸವಾಲಿನಲ್ಲಿ, ನಿಪಿ.4 ರಲ್ಲಿ ಬರೆದಿರುವ ವಿಷಯಗಳು ನಾನು ಓದಿ ತಿಳಿದುಕೊಂಡಿಲ್ಲ ಮತ್ತು ಗುನ್ನೆ ಸ್ಥಳದ ಚೆಕ್ಕುಬಂದಿ ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನಾನು ಯಾವುದೇ ಗುನ್ನೆ ಸ್ಥಳಕ್ಕೆ ಹೋಗಿಲ್ಲ ಮತ್ತು ಸಹಿ ಮಾಡಿಲ್ಲ ಎಂದರೆ ಸಾಕ್ಷಿಯು ಮುದೇನೂರು ಕ್ರಾಸನಲ್ಲಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆದರೆ ನಿಪಿ.4 ರ ಪ್ರಕಾರ ಸಾಸ್ವಿಹಾಳ ಸೀಮಾದಲ್ಲಿ ಸಹಿ ಮಾಡಿರುತ್ತಾರೆ. ಇನ್ನುಳಿದಂತೆ ಆರೋಪಿತರ ಪರ ವಕೀಲರು ಹಾಕಿರುವ ಎಲ್ಲಾ ಹಾರಿಕೆ ನಿರಾಕರಣೆಗಳನ್ನು ಪ್ರಾಸಾ-3 ರವರು ಅಲ್ಲಗಳಲೆದಿರುತ್ತಾರೆ.

**14.** ಈ ಪ್ರಕರಣದ **ಶವ ಪಂಚನಾಮ ಸಾಕ್ಷಿಯಾದ ಚಾಸಾ-4 ಲಕ್ಷ್ಮವ್ವ ಇವರನ್ನು ಪ್ರಾಸಾ-4 ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಪ್ರಾಸಾ-2** ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಮೃತ ಶ್ಯಾಮಿದಾಬಿರವರ ಪರಿಚಯವಿಲ್ಲ. ಸದರಿ ದಾಖಲೆಗೆ ಪೋಲಿಸರು ಸಹಿ ಮಾಡುವಂತೆ ಸೂಚಿಸಿದ ಮೇರೆಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯು ಯಾವುದರ ಕುರಿತು ಮತ್ತು ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಶವ ಮಹಜರನ್ನು ಜರುಗಿಸಿರುವುದಿಲ್ಲವೆಂದು ಈ ಮೇಲಿನಂತೆ ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

ಮಾನ್ಯ ಸ.ಸ.ಅರವರು ಪ್ರಾಸಾ-4 ರವರನ್ನು ಪಾಟಿ ಸವಾಲು ಮಾಡಿದಾಗ್ಯೂ ಸಹಾ ತಮ್ಮ ಪರವಾದ ಅನುಕೂಲಕರವಾದ ಅಂಶಗಳನ್ನು ಹೊರತೆಗೆಯುವಲ್ಲಿ ವಿಫಲರಾಗಿರುತ್ತಾರೆ.

**15.** ಈ ಪ್ರಕರಣದ **ಕೇಳಿಕೆಯ ಸಾಕ್ಷಿಯಾದ ಚಾಸಾ-10 ಶರೀಫಸಾಬ ಇವರನ್ನು ಪ್ರಾಸಾ-5 ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಪ್ರಾಸಾ-5** ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಮೃತ ಶ್ಯಾಮಿದಾಬಿರವರ ನನ್ನ ಅತ್ತಿಗೆ. ಪೋಲಿಸರು ನನ್ನ ವಿಚಾರಿಸಿ ಯಾುವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಶವಮಹಜರನ್ನು ಜರುಗಿಸಿರುವುದಿಲ್ಲ. ನನ್ನ ಅತ್ತಿಗೆ ಶ್ಯಾಮಿದಾಬಿರವರು ಅಪಘಾತದಲ್ಲಿ ಮೃತಪಟ್ಟಿರುತ್ತಾರೆ ಮತ್ತು ಸದರಿ ಅಪಘಾತವು ಹೇಗೆ ಸಂಭವಿಸಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಯಾವುದೇ ಆಸ್ಪತ್ರೆಗೆ ಭೇಟಿ ನೀಡಿರುವುದಿಲ್ಲವೆಂದು ಈ ಮೇಲಿನಂತೆ ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

ಮಾನ್ಯ ಸ.ಸ.ಅರವರು ಪ್ರಾಸಾ-5 ರವರನ್ನು ಪಾಟಿ ಸವಾಲು ಮಾಡಿದಾಗ್ಯೂ ಸಹಾ ತಮ್ಮ ಪರವಾದ ಅನುಕೂಲಕರವಾದ ಅಂಶಗಳನ್ನು ಹೊರತೆಗೆಯುವಲ್ಲಿ ವಿಫಲರಾಗಿರುತ್ತಾರೆ.

**16.** ಈ ಪ್ರಕರಣದ **ಶವ ಪಂಚನಾಮೆಯ ಪಂಚ ಸಾಕ್ಷಿಯಾದ ಚಾಸಾ-2 ಶಮೀದಸಾಬ ಇವರನ್ನು ಪ್ರಾಸಾ-6 ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಪ್ರಾಸಾ-6** ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿತರ ಪರಿಚಯವಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಶವಪಂಚನಾಮೆಯನ್ನು ಜರುಗಿಸಿರುವುದಿಲ್ಲವೆಂದು ಈ ಮೇಲಿನಂತೆ ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

ಮಾನ್ಯ ಸ.ಸ.ಅರವರು ಪ್ರಾಸಾ-6 ರವರನ್ನು ಪಾಟಿ ಸವಾಲು ಮಾಡಿದಾಗ್ಯೂ ಸಹಾ ತಮ್ಮ ಪರವಾದ ಅನುಕೂಲಕರವಾದ ಅಂಶಗಳನ್ನು ಹೊರತೆಗೆಯುವಲ್ಲಿ ವಿಫಲರಾಗಿರುತ್ತಾರೆ.

**17.** ಈ ಪ್ರಕರಣದಲ್ಲಿ **ಕೇಳಿಕೆಯ ಸಾಕ್ಷಿಯಾದ ಚಾಸಾ-8 ಕಾಸಿಂಸಾಬ ಇವರನ್ನು ಪ್ರಾಸಾ-7 ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಪ್ರಾಸಾ-7** ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ನನಗೆ ಪ್ರಕರಣದ ಕುರಿತು ಮಾಹಿತಿ ಇಲ್ಲ. ನನ್ನ ವಾಹನ ಯಾವುದೇ ರೀತಿ ಅಪಘಾತವಾಗಿರುವುದಿಲ್ಲ. ಆರೋಪಿ ನನ್ನ ವಾಹನವನ್ನು ಚಲಾಯಿಸಿರುವುದಿಲ್ಲವೆಂದು ಈ ಮೇಲಿನಂತೆ ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

ಮಾನ್ಯ ಸ.ಸ.ಅರವರು ಪ್ರಾಸಾ-7 ರವರನ್ನು ಪಾಟಿ ಸವಾಲು ಮಾಡಿದಾಗ್ಯೂ ಸಹಾ ತಮ್ಮ ಪರವಾದ ಅನುಕೂಲಕರವಾದ ಅಂಶಗಳನ್ನು ಹೊರತೆಗೆಯುವಲ್ಲಿ ವಿಫಲರಾಗಿರುತ್ತಾರೆ.

**18.** ಈ ಪ್ರಕರಣದಲ್ಲಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ **ಸಾಕ್ಷಿಯಾದ ಚಾಸಾ-11 ಛತ್ರಪ್ಪ ಇವರನ್ನು ಪ್ರಾಸಾ-8 ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಪ್ರಾಸಾ-8** ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕಃ13.12.2016 ರಂದು ರಾತ್ರಿ 8.15 ಗಂಟೆಗೆ ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ-16 ರವರು ನನಗೆ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವಂತೆ ಹೇಳಿದ್ದು ಅದರಂತೆ ಮಾನ್ಯ ನ್ಯಾಯಾಲಯಕ್ಕೆ ದಿನಾಂಕಃ14.12.2016 ರಂದು ಬೆಳಗ್ಗೆ 10.00 ಗಂಟೆಗೆ ಪ್ರ.ವ.ವರದಿಯನ್ನು ಸಲ್ಲಿಸಿರುತ್ತೇನೆ. ಈ ಪ್ರಕರಣದ ಕುರಿತು ದಿನಾಂಕಃ14.12.2016 ರಂದು ಚಾಸಾ-17 ರವರ ಮುಂದೆ ಹೇಳಿಕೆ ನೀಡಿರುತ್ತೇನೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

ಆರೋಪಿ ಪರ ವಕೀಲರು ಪ್ರಾಸಾ-8 ರವರನ್ನು ಪಾಟಿ ಸವಾಲು ಮಾಡಿದಾಗ ತಮ್ಮ ಪಾಟಿ ಸವಾಲಿನಲ್ಲಿ, ತಮ್ಮ ಪರವಾದ ಅನುಕೂಲಕರವಾದ ಅಂಶಗಳನ್ನು

ಹೊರತೆಗೆಯುವಲ್ಲಿ ವಿಫಲರಾಗಿರುತ್ತಾರೆ. ಇನ್ನುಳಿದಂತೆ ಆರೋಪಿತರ ಪರ ವಕೀಲರು ಹಾಕಿರುವ ಎಲ್ಲಾ ಹಾರಿಕೆ ನಿರಾಕರಣೆಗಳನ್ನು ಪ್ರಾಸಾ-8 ರವರು ಅಲ್ಲಗಳಲೆದಿರುತ್ತಾರೆ.

**19.** ಈ ಪ್ರಕರಣದ ವೈದ್ಯಾಧಿಕಾರಿಯಾದ **ಸಾಕ್ಷಿಯಾದ** ಡಾಃಚಂದ್ರಶೇಖರ ದಂಡಿ **ಚಾಸಾ-13 ಇವರನ್ನು ಪ್ರಾಸಾ-9 ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಪ್ರಾಸಾ-9** ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕಃ13/11/2016 ರಂದು ರಾತ್ರಿ 7.30 ಗಂಟೆಯ ಸಮಯದಲ್ಲಿ ಚಾಸಾ-1 ರವರು ರಸ್ತೆಯ ಅಪಘಾತದ ಇತಿಹಾಸ ಹೇಳಿಕೊಂಡು ಗಾಯದ ಚೀಕಿತ್ಸೆ ಸಲುವಾಗಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು ಮತ್ತು ಚಾಸಾ-1 ರವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡುಬಂದಿದ್ದವುಃ ಒಂದು ಹಣೆಯ ಮೇಲೆ ತೆರೆಚಿದ ಗಾಯ ಮತ್ತು ಬಾವು ಅದ್ದು 2 ಇಂಟು 1 ಸೇ.ಮೀ. ಅಳತೆಯ ಗಾಯ ಕಂಡುಬಂದಿತ್ತು. ಸೊಂಟದ ಮೇಲೆ ಬಾವು ಮತ್ತು ನೋವು ಕಂಡುಬಂದಿರುತ್ತದೆ. 3.ತೆರೆಚಿದ ಗಾಯ ಮತ್ತು ಬಾವು ಹಣೆಯ ಹಿಂಬಾಗದಲ್ಲಿ ಕಂಡುಬಂದಿರುತ್ತದೆ. ಈ ಮೇಲಿನ ಗಾಯಗಳು ಸಾದಾ ಸ್ವರೂಪದ ಗಾಯಗಳು ಆಗಿದ್ದು ಅಪಘಾತ ನಡೆದ 6 ತಾಸಿನ ಒಳಗೆ ಆದಂತಹ ಗಾಯಗಳು ಆಗಿರುತ್ತವೆ. ಈ ಮೇಲಿನ ಚಾಸಾ-1 ರವರನ್ನು ಪರೀಕ್ಷಿಸಿ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸದರಿ ದಾಖಲೆಯು ನಾನು ನೀಡಿದ ಗಾಯದ ಪ್ರಮಾಣ ಪತ್ರ. ದಿನಾಂಕಃ13.12.2016 ರಂದು ರಾತ್ರಿ 11.40 ಗಂಟೆಗೆ ಅಪಘಾತದಲ್ಲಿ ಮೃತಪಟ್ಟ ಶ್ಯಾಮೀದ್ ಸಾಬ್ ಲಾಟಿ ರವರನ್ನು ಶವಪರೀಕ್ಷೆಯನ್ನು ರಾತ್ರಿ 10.30 ಗಂಟೆಯಿಂದ ರಾತ್ರಿ 11.30 ಗಂಟೆಯವರೆಗೆ ಶ್ಯಾಮಿದ್ ಬಿ ಗಂಡ ರಾಜೇಸಾಬ್ ಲಾಟಿರವರ ಶವಪರೀಕ್ಷೆ ಮಾಡಿದ್ದು. ಶವಪರೀಕ್ಷೆಯ ಕಾಲಕ್ಕೆ ತಲೆಯಲ್ಲಿ ರಕ್ತಸ್ರಾವ ಉಂಟಾಗಿ ರಕ್ತ ಹೆಪ್ಪುಗಟ್ಟಿ ಮರಣ ಹೊಂದಿರುತ್ತಾರೆ ಎಂದು ಅಭಿಪ್ರಾಯ ನೀಡಿರುತ್ತೆನೆ. ಈ ಕುರಿತು ಶವಪರೀಕ್ಷಾ ವರದಿಯನ್ನು ನೀಡಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

ಆರೋಪಿ ಪರ ವಕೀಲರು ಪ್ರಾಸಾ-9 ರವರನ್ನು ಪಾಟಿ ಸವಾಲು ಮಾಡಿದಾಗ ತಮ್ಮ ಪಾಟಿ ಸವಾಲಿನಲ್ಲಿ, ನಿಪಿ.9 ರಲ್ಲಿನ ಗಾಯಗಳು ತಮ್ಮಷ್ಟಕ್ಕೆ ತಾವೇ ರಸ್ತೆಯ ಮೇಲೆ ಬಿದ್ದರೆ ಉಂಟಾಗುತ್ತವೆ ಎಂದರೆ ಸರಿ ಎಂದು ನುಡಿಯುತ್ತಾರೆ. ಈಗಾಗಲೇ ಶವಪಂಚರು ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದು, ಸದರಿ ಅಪಘಾತದಿಂದ

ಶಾಮೀದಬೀ ರವರು ಮೃತಪಟ್ಟಿರುತ್ತಾರೆ ಎಂದು ನಂಬಲು ಸಾಧ್ಯವಿರುವುದಿಲ್ಲ. ಇನ್ನುಳಿದಂತೆ ಆರೋಪಿತರ ಪರ ವಕೀಲರು ಹಾಕಿರುವ ಎಲ್ಲಾ ಹಾರಿಕೆ ನಿರಾಕರಣೆಗಳನ್ನು ಪ್ರಾಸಾ-9 ರವರು ಅಲ್ಲಗಳಲೆದಿರುತ್ತಾರೆ.

**20.** ಈ ಪ್ರಕರಣದ ಶವಪಂಚನಾಮೆ ನಿರ್ವಹಿಸಿದ ಸಾಕ್ಷಿಯಾದ **ಚಾಸಾ-15 ದೊಡ್ಡಪ್ಪ ಇವರನ್ನು ಪ್ರಾಸಾ-10 ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಪ್ರಾಸಾ-10** ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿಃ13.12.2016 ರಂದು ಮೃತ ಶ್ಯಾಮೀದ ಬಿ ಗಂಡ ರಾಜಸಾಬ ಲಾಟಿ ರವರ ಶವ ಪಂಚನಾಮೆಯನ್ನು ಚಾಸಾ2 ರಿಂದ 4 ರವರ ಸಮಕ್ಷಮ ರಾತ್ರಿ8.30 ರಿಂದ 10.15 ಗಂಟೆಯವರೆಗೆ ಶವ ಪಂಚನಾಮೆ ಜರುಗಿಸಿರುತ್ತೇನೆ. ಅದೇ ದಿನ ಚಾಸಾ-9 ಮತ್ತು 10 ಮತ್ತು 1 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

ಈಗಾಗಲೇ ಶವ ಮಹಜರದಾರರು ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದು, ಸದರಿ ಅವರ ಸಾಕ್ಷ್ಯವು ನಂಬಲು ಅನರ್ಹವಾಗಿರುತ್ತದೆ. ಇನ್ನುಳಿದಂತೆ ಆರೋಪಿತರ ಪರ ವಕೀಲರು ಹಾಕಿರುವ ಎಲ್ಲಾ ಹಾರಿಕೆ ನಿರಾಕರಣೆಗಳನ್ನು ಪ್ರಾಸಾ-10 ರವರು ಅಲ್ಲಗಳಲೆದಿರುತ್ತಾರೆ.

**21.** ಈ ಪ್ರಕರಣದ ಮೊದಲನೇ ಹಂತದ ತನಿಖಾಧಿಕಾರಿ ಸಾಕ್ಷಿಯಾದ **ಚಾಸಾ-16 ಈರಣ್ಣ ಇವರನ್ನು ಪ್ರಾಸಾ-11 ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಪ್ರಾಸಾ-11** ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕಃ13/12/2016 ರಂದು ಸಂಜೆ 5.00 ಗಂಟೆಯ ಸಮಯದಲ್ಲಿ ಠಾಣಾ ಕರ್ತವ್ಯದಲ್ಲಿದ್ದಾಗ ಮುದೇನೂರು ಸರಕಾರಿ ಆಸ್ಪತ್ರೆಯಿಂದ ಎಮ್ ಎಲ್ ಸಿ ದೂರವಾಣಿ ಕರೆ ಬಂದಿದ್ದು. ಅದರಂತೆ ಆಸ್ಪತ್ರೆಗೆ ಹೋಗಿ ಅಲ್ಲಿ ಚಾಸಾ-1 ರವರ ನೀಡಿದ ಹೇಳಿಕೆಯ ಆಧಾರದ ಮೇಲೆ ಸಂಜೆ 7.15 ಗಂಟೆಗೆ ಮರಳಿ ಠಾಣೆಗೆ ಬಂದು ಗುನ್ನಾ ನಂಬರಃ13/2016 ನ್ನು ಭಾ.ದಂ.ಸಂಹಿತೆ ಕಲಂ.279, 337 ಮತ್ತು 304(ಎ) ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ದಿನಾಂಕಃ13.12.2016 ರಂದು ಪಿಸಿ-12 ರವರು

ಅಪಘಾತಪಡಿಸಿದ ವಾಹನಗಳನ್ನು ಠಾಣೆಗೆ ತಂದಿದ್ದು ಠಾಣೆಯಲ್ಲಿ ಜಪ್ತಿಪಂಚನಾಮೆಯನ್ನು ಚಾಸಾ-5 ಮತ್ತು ಚಾಸಾ-6 ರವರ ಸಮಕ್ಷಮ ಜಪ್ತಿಪಂಚನಾಮೆಯನ್ನು ಜರುಗಿಸಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

ಆರೋಪಿ ಪರ ವಕೀಲರು ಪ್ರಾಸಾ-11 ರವರನ್ನು ಪಾಟಿ ಸವಾಲು ಮಾಡಿದಾಗ ತಮ್ಮ ಪಾಟಿ ಸವಾಲಿನಲ್ಲಿ, ತಮ್ಮ ಪರವಾದ ಅನುಕೂಲಕರವಾದ ಅಂಶಗಳನ್ನು ಹೊರತೆಗೆಯುವಲ್ಲಿ ವಿಫಲರಾಗಿರುತ್ತಾರೆ. ಇನ್ನುಳಿದಂತೆ ಆರೋಪಿತರ ಪರ ವಕೀಲರು ಹಾಕಿರುವ ಎಲ್ಲಾ ಹಾರಿಕೆ ನಿರಾಕರಣೆಗಳನ್ನು ಪ್ರಾಸಾ-11 ರವರು ಅಲ್ಲಗಳಲೆದಿರುತ್ತಾರೆ.

**22.** ಈ ಪ್ರಕರಣದ **ಗುನ್ನೆ ಜಾಗ ಪಂಚನಾಮ ಸಾಕ್ಷಿಯಾದ ಚಾಸಾ-5 ಯಮನಪ್ಪ ಇವರನ್ನು ಪ್ರಾಸಾ-12 ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಪ್ರಾಸಾ-12** ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ-1 ಮತ್ತು ಆರೋಪಿತರ ಪರಿಚಯವಿಲ್ಲ. ಈಗ ನನಗೆ ತೋರಿಸಿದ ಸ್ಥಳ ಪಂಚನಾಮೆಯಲ್ಲಿರುವ ಸಹಿ ನನ್ನದು. ಸದರಿ ದಾಖಲೆಗೆ ಸುಮಾರು 8 ವರ್ಷಗಳ ಹಿಂದೆ ತಾವರಗೇರಾ ಪೋಲಿಸ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯು ಯಾವುದರ ಕುರಿತು ಮತ್ತು ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ನಾನು ಯಾವುದೆ ಅಪಘಾತದ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ ಮತ್ತು ನನ್ನ ಸಮಕ್ಷಮ ರಾಮಣ್ಣರವರು ಯಾವುದೆ ಅಪಘಾತದ ಸ್ಥಳವನ್ನು ತೋರಿಸಿರುವುದಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೆ ಅಪಘಾತದ ಸ್ಥಳದ ಮಹಜರನ್ನು ಜರುಗಿಸಿ ಯಾವುದೇ ವಾಹನವನ್ನು ಜಪ್ತಿಪಡಿಸಿಕೊಂಡಿರುವುದಿಲ್ಲವೆಂದು ಈ ಮೇಲಿನಂತೆ ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

ಮಾನ್ಯ ಸ.ಸ.ಅರವರು ಪ್ರಾಸಾ-12 ರವರನ್ನು ಪಾಟಿ ಸವಾಲು ಮಾಡಿದಾಗ್ಯೂ ಸಹಾ ತಮ್ಮ ಪರವಾದ ಅನುಕೂಲಕರವಾದ ಅಂಶಗಳನ್ನು ಹೊರತೆಗೆಯುವಲ್ಲಿ ವಿಫಲರಾಗಿರುತ್ತಾರೆ.

**23.** ಈ ಪ್ರಕರಣದ ಪೂರ್ಣ ಹಂತದ ತನಿಖಾಧಿಕಾರಿಯಾದ **ಚಾಸಾ-17** ಗಿರೀಶ **ರೋಡ್ಕರ್ ಇವರನ್ನು ಪ್ರಾಸಾ-13 ಎಂದು ವಿಚಾರಣೆಗೊಳಪಡಿಸಿರುತ್ತಾರೆ.** ಪ್ರಾಸಾ-13

ಇವರು ತಮ್ಮ ಮುಖ್ಯವಿಚಾರಣೆಯಲ್ಲಿ, ದಿನಾಂಕಃ14.12.2016 ರಂದು ಚಾಸಾ-16 ರವರಿಂದ ಪ್ರಕರಣದ ಕಡತವನ್ನು ಸ್ವೀಕರಿಸಿಕೊಂಡು ತನೀಖೆಯನ್ನು ಮುಂದುವರೆಸಿರುತ್ತೇನೆ. ನಂತರ ಅದೆ ದಿನ ಬೆಳಗ್ಗೆ 10.45 ರಿಂದ 11.30 ಗಂಟೆಯವರೆಗೆ ಸ್ಥಳ ಪಂಚನಾಮೆಯನ್ನು ಪಂಚರರ ಸಮಕ್ಷಮ ಜರುಗಿಸಿರುತ್ತೇನೆ. ನಂತರ ಸಾಕ್ಷಿದಾರರಾದ ಚಾಸಾ-3, ಚಾಸಾ-4 ಮತ್ತು ಚಾಸಾ-8, ಚಾಸಾ-11, ಚಾಸಾ-12 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ದಿನಾಂಕಃ28.12.2016 ರಂದು ಚಾಸಾ-14 ರವರಿಂದ ಮೋಟಾರವಾಹನದ ವರದಿಯನ್ನು ಸ್ವೀಕರಿಸಿಕೊಂಡಿರುತ್ತೇನೆ. ಚಾಸಾ-13 ರವರಿಂದ ಗಾಯದ ಪ್ರಮಾಣ ಪತ್ರ ಮತ್ತು ಶವ ತನೀಖಾ ವರದಿಯನ್ನು ಸ್ವೀಕರಿಸಿಕೊಂಡಿರುತ್ತೇನೆ. ಅಪಘಾತಕ್ಕೆ ಒಳಗಾದ ವಾಹನವನುನ ಮಾಲೀಕರ ಪರವಾಗಿ ಬಿಡುಗಡೆಗೊಳಿಸಿರುತ್ತೇನೆ. ನಂತರ ವಾಹನಕ್ಕೆ ಸಂಬಂದಿಸಿದ ದಾಖಲೆಗಳನ್ನು ಸ್ವೀಕರಿಸಿಕೊಂಡಿರುತ್ತೇನೆ. ನಿಂಗರೇಡ್ಡೆಪ್ಪ/ಚಾಸಾ-7 ರವರ ಮುಚ್ಚಳಿಕೆ ಪತ್ರವನ್ನು ಬರೆಸಿಕೊಂಡು ಮತ್ತು ವಾಹನಕ್ಕೆ ಸಂಬಂದಿಸಿದ ದಾಖಲೆಗಳನ್ನು ಪಡೆದುಕೊಂಡು ವಾಹನ ಬಿಡುಗಡೆಗೊಳಿಸಿರುತ್ತೇನೆ. ದಿನಾಂಕಃ25.12.2016 ರಂದು ಅಂತಿಮವಾಗಿ ನ್ಯಾಯಾಲಯಕ್ಕೆ ಆರೋಪಿಯ ವಿರುದ್ದ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ.

ಆರೋಪಿತರ ಪರ ವಕೀಲರು ಪ್ರಾಸಾ-13 ರವರನ್ನು ಪಾಟಿ ಸವಾಲು ಮಾಡಿದಾಗ್ಯೂ ಸಹಾ ತಮ್ಮ ಪರವಾದ ಅನುಕೂಲಕರವಾದ ಅಂಶಗಳನ್ನು ಹೊರತೆಗೆಯುವಲ್ಲಿ ವಿಫಲರಾಗಿರುತ್ತಾರೆ.

ಸದರಿ ಪ್ರಕರಣದಲ್ಲಿ ಈಗಾಗಲೇ ಸ್ಥಳ ಮತ್ತು ಜಪ್ತಿ ಮಹಜರು ಸಾಕ್ಷಿದಾರರಾದ ಚಾಸಾ-2 ರಿಂದ 6 ಮತ್ತು ಇತರ ಸಾಕ್ಷಿದಾರರಾದ ಚಾಸಾ-8 ರಿಂದ 10 ರವರು ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಕೇವಲ ಪೋಲಿಸ್ ಸಾಕ್ಷಿದಾರರಾದ ಚಾಸಾ-11, 16 ಮತ್ತು 17 ರವರ ಸಾಕ್ಷ್ಯವು ಆರೋಪಿತರ ಮೇಲಿನ ಆರೋಪವನ್ನು ರುಜುವಾತು ಪಡಿಸಲು ಸಹಾಯಕಾರಿ ಆಗಿರುವುದಿಲ್ಲ.

**24**. ಈ ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದಾಗ, **ಫಿರ್ಯಾದಿದಾರ, ಶವಪಂಚನಾಮೆ ಸಾಕ್ಷಿಗಳು, ಕೇಳಿಕೆಯ ಸಾಕ್ಷಿಗಳು ಮತ್ತು ಸ್ಥಳ ಪಂಚನಾಮೆ ಸಾಕ್ಷಿಗಳು**

ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿದ್ದು, ಅಪಘಾತವು ಯಾವ ರೀತಿಯಲ್ಲಿ ಮತ್ತು ಯಾರ ತಪ್ಪಿನಿಂದ ಆಗಿದೆ ಎಂದು ನಿರ್ಣಯಿಸಲು ಸಾಧ್ಯವಿರುವುದಿಲ್ಲ ಮತ್ತು ಅಪಘಾತವು ಆರೋಪಿಯ ದುಡುಕು ಮತ್ತು ನಿರ್ಲಕ್ಷತನದಿಂದಲೇ ಸಂಭವಿಸಿರುತ್ತದೆ ಎನ್ನುವ ಬಗ್ಗೆ ಯಾವುದೇ ಸ್ವೀಕಾರ್ಹವಾದ ಸಾಕ್ಷ್ಯಗಳು ಲಭ್ಯವಿರುವದಿಲ್ಲ ಮತ್ತು ಆರೋಪಿ ವಿರುದ್ದ ಹೊರಡಿಸಲಾದ ಆರೋಪಗಳನ್ನು ರುಜುವಾತು ಪಡಿಸಲು ಅಭಿಯೋಜನೆಯು ವಿಫಲವಾಗಿರುತ್ತದೆ. ಈ ರೀತಿಯಾಗಿ ಅಭಿಯೋಜನೆಯು ಆರೋಪಿಯ ವಿರುದ್ಧ ಮಾಡಲಾದ ಆರೋಪವನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುತ್ತದೆ. ಆದ್ದರಿಂದ ಅಂಶ-1 ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

**25**. <u>ಅಂಶ 2 ಃ</u>- ಅಂಶ 1 ಕ್ಕೆ ಈ ಮೇಲ್ಕಂಡಂತೆ ಉತ್ತರಿಸಿರುವುದರಿಂದ ಈ ಕೆಳಕಂಡಂತೆಃ

# ಆದೇಶ

ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ.255(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ 1 ನೇ ಆರೋಪಿತನನ್ನು ಭಾರತೀಯ ದಂಡ ಸಂಹಿತೆಯ **ಕಲಂ.279, 337, 304(ಎ) ಮತ್ತು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ.181, 196 ಮತ್ತು 2 ನೇ ಆರೋಪಿತನು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ.180** ರಡಿಯಲ್ಲಿ ಮಾಡಲಾದ ಆರೋಪಗಳಿಂದ ಈ ಕೂಡಲೇ ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಿದೆ.

ಜಪ್ತಿ ಪಡಿಸಿಕೊಂಡ ವಾಹನವನ್ನು ಈಗಾಗಲೇ ಅರ್ಜಿದಾರರ ಪರವಾಗಿ ಪೊಲೀಸರು ಬಿಡುಗಡೆಗೊಳಿಸಿದ್ದು, ಮೇಲ್ಮನವಿಯ ಅವದಿ ಮುಗಿದ ನಂತರ ನಿರುಪಾದಿಕಗೊಳಿಸಲಾಗಿದೆ.

ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ 437(ಎ) ರಡಿಯಲ್ಲಿನ ಆರೋಪಿತರ ಮತ್ತು ಜಾಮೀನುದಾರರ ಜಾಮೀನು ಮುಚ್ಚಳಿಕೆಯು ಈ ತೀರ್ಪು ನೀಡಿದ 6 ತಿಂಗಳ ನಂತರ ರದ್ದಾಗುವುದು ಎಂದು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನವನ್ನು ನೀಡಿದ್ದು, ಬೆರಳಚ್ಚು ಮಾಡಿದ ನಂತರ ಓದಿ ತಿದ್ದುಪಡಿ ಮಾಡಿ, ಪರಿಶೀಲಿಸಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕ 01 ನೇ ಜುಲೈ 2026 ರಂದು ಘೋಷಿಸಲಾಯಿತು.)

**(ಮಹಾಂತೇಶ ಚೌಲಗಿ)**
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕುಷ್ಟಗಿ.

# ಅನುಬಂಧ

## ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿಗಳುಃ-

| ಕ್ರಮ ಸಂಖ್ಯೆ | | ಶ್ರೇಣಿ | ಹೆಸರು | ಸಾಕ್ಷ್ಯದ ಸ್ವರೂಪ |
|---|---|---|---|---|
| 1 | | ಪ್ರಾಸಾ-1 | ಮುತ್ತು ಕಠಾರಿ | ಫಿರ್ಯಾದಿದಾರರು |
| 2 | | ಪ್ರಾಸಾ-2 | ರಾಮಪ್ಪ | ಪ್ರತ್ಯಕ್ಷ ಸಾಕ್ಷಿದಾರರು |
| 3 | | ಪ್ರಾಸಾ-3 | ದಿವಾನಸಾಬ | ಗುನ್ನೆ ಜಾಗ ಪಂಚಸಾಕ್ಷಿದಾರರು |
| 4 | | ಪ್ರಾಸಾ-4 | ಲಕ್ಷ್ಮವ್ವ | ಶವ ಪಂಚನಾಮೆ ಪಂಚ ಸಾಕ್ಷಿದಾರರು |
| 5 | | ಪ್ರಾಸಾ-5 | ಶರೀಫಸಾಬ | ಶವ ಪಂಚನಾಮ ಕಾಲಕ್ಕೆ ಹಾಜರಿದ್ದ ಸಾಕ್ಷಿದಾರರು |
| **6** | | ಪ್ರಾಸಾ-6 | ಶ್ಯಾಮಿದ ಸಾಬ್ | ಶವಪಂಚನಾಮೆ ಸಾಕ್ಷಿದಾರರು |
| **7** | | ಪ್ರಾಸಾ-7 | ಕಾಸಿಂ ಸಾಬ್ | ಆರೋಪಿ ಪರ ವಾಹನ ಮಾಲಿಕರು ಮತ್ತು ಇಂಡೆಮ್ನಿಟಿ ಬಾಂಡ್ ನೀಡಿದವರು |
| **8** | | ಪ್ರಾಸಾ-8 | ಛತ್ರಪ್ಪ | ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದವರು |

| | | | | |
|---|---|---|---|---|
| **9** | | ಪ್ರಾಸಾ-9 | ಡಾಃಚಂದ್ರಶೇಖರ ದಂಡಿ | ವೈದ್ಯಾಧಿಕಾರಿ |
| **10** | | ಪ್ರಾಸಾ-10 | ದೊಡ್ಡಪ್ಪ | ಶವಪಂಚನಾಮೆ ನಿರ್ವಹಿಸಿದವರು |
| **11** | | ಪ್ರಾಸಾ-11 | ಈರಣ್ಣ | ಮೊದಲ ಹಂತದ ತನಿಖಾಧಿಕಾರಿ ಸಾಕ್ಷಿದಾರರು |
| **12** | | ಪ್ರಾಸಾ-12 | ಯಮನಪ್ಪ | ಗುನ್ನೆ ಜಾಗ ಪಂಚರು |
| **13** | | ಪ್ರಾಸಾ-13 | ಗಿರೀಶ ರೋಡ್ಕರ್ | ಪೂರ್ಣ ಹಂತದ ತನಿಖಾಧಿಕಾರಿ |

**ಅಭಿಯೋಜನೆಯ ಪರ ಹಾಜರುಪಡಿಸಿದ ದಾಖಲೆಗಳುಃ-**

| ಕ್ರಮ ಸಂಖ್ಯೆ | ನಿಶಾನೆಗಳ ಸಂಖ್ಯೆ | | ವಿವರಣೆ |
|---|---|---|---|
| **1** | ನಿ ಪಿ 1 | | ದೂರು |
| **2** | ನಿ ಪಿ 2 | | ಶವ ತನಿಖಾ ಪಂಚನಾಮೆ |
| **3** | ನಿ ಪಿ 3 | | ಪ್ರಾಸಾ.2 ರವರ ಹೇಳಿಕೆ |
| **4** | ನಿ ಪಿ 4 | | ಗುನ್ನೆ ಜಾಗೆ ಪಂಚನಾಮೆ |
| **5** | ನಿ ಪಿ 5 | | ಪ್ರಾಸಾ.5 ರವರ ಹೇಳಿಕೆ |
| **6** | ನಿ ಪಿ 6 | | ಮುಚ್ಚಳಿಕೆ ಪತ್ರ |
| **7** | ನಿ ಪಿ 7 | | ಪ್ರಾಸಾ-7 ರವರ ಹೇಳಿಕೆ |
| **8** | ನಿ ಪಿ 8 | | ಗಾಯದ ಪ್ರಮಾಣ ಪತ್ರ |
| **9** | ನಿ ಪಿ 9 | | ಪಿ.ಎಂ.ವರದಿ |
| **10** | ನಿ ಪಿ 10 | | ವಾಹನ ಜಪ್ತಿ ಪಂಚನಾಮೆ |

| | | | |
|---|---|---|---|
| **11** | ನಿ ಪಿ 11 | | ಪ್ರಥಮ ವರ್ತಮಾನ ವರದಿ |
| **12** | ನಿ ಪಿ 12 | | ವಾಹನ ವರದಿ |
| **13** | ನಿ ಪಿ 13 | | ಮುಚ್ಚಳಿಕೆಯ ಪತ್ರ |
| **14** | ನಿ ಪಿ 14 | | ಚಾಲನಾ ಪರವಾನಿಗೆ ಪತ್ರ |
| **15** | ನಿ ಪಿ 15 ಮತ್ತು 16 | | ವಾಹನದ ದಾಖಲಾತಿಗಳು |
| **16** | ನಿ ಪಿ 17 | | ಇನ್ಸುರೆನ್ಸ್ ಪತ್ರ |

**3. ಆರೋಪಿ/ತರ ಪರ ವಿಚಾರಣೆ ಮಾಡಿದ ಸಾಕ್ಷಿಗಳು:-**

---- ಇಲ್ಲ ----

**4. ಆರೋಪಿ/ತರ ಪರ ಹಾಜರುಪಡಿಸಿದ ದಾಖಲೆಗಳು:-**

---- ಇಲ್ಲ -----

**5. ನ್ಯಾಯಾಲಯದ ಪರ ವಿಚಾರಣೆ ಮಾಡಿದ ಸಾಕ್ಷಿಗಳು:-**

---- ಇಲ್ಲ ----

**6. ನ್ಯಾಯಾಲಯದ ಪರ ಹಾಜರುಪಡಿಸಿದ ದಾಖಲೆಗಳು:-**

---- ಇಲ್ಲ ----

**7. ಅಭಿಯೋಜನೆಯ ಪರ ಗುರುತು ಮಾಡಿದ ಮುದ್ದೆ ಮಾಲುಗಳು:-**

---- ಇಲ್ಲ ----

MAHANTESH RAYAPPA CHOULAGI

Digitally signed by MAHANTESH RAYAPPA CHOULAGI
Date: 2026.07.07 13:23:05 +0530

(ಮಹಾಂತೇಶ ಚೌಲಗಿ)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕುಷ್ಟಗಿ.